ಇ) ಈ ಆಸ್ಪತ್ರೆಯು 50 ಹಾಸಿಗೆಗಳುಳ್ಳ ಸಾಮರ್ಥ್ಯ ಹೊಂದಿದೆ. 50 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗೆ ಗೊತ್ತುಪಡಿಸಿರುವ ವೈದ್ಯರುಗಳ ಸಂಖ್ಯೆಯು 7 ಆಗಿದ್ದು, 6 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವೈದ್ಯರುಗಳ ವಿವರ ಕೆಳಕಂಡಂತಿದೆ.

			ಸಂಖ್ಯೆ
1.	ಮಕ್ಕಳ ತಜ್ಞರು	-	2
2.	ಕಣ್ಣಿನ ತಜ್ಞರು	-	1
3.	ಇ.ಎನ್‌ಟಿ ತಜ್ಞರು	-	1
4.	ಮೂಳೆ ತಜ್ಞರು	-	1
5.	ಅರವಳಿಕೆ ತಜ್ಞರು (ಗುತ್ತಿಗೆ ಆಧಾರದ ಮೇರೆಗೆ)	-	1

ಈ) ಎಂಡಿ/ಎಂ.ಎಸ್ ಮಾಡಿರುವವರು ಇರುವುದಿಲ್ಲ.

ಉ) ಇರುವುದಿಲ್ಲ.

ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಭರ್ತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಹುಮ್ನಾಬಾದ್ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ವಿತರಿಸುವ ಆಹಾರ

2620(2950) ಶ್ರೀ ಸುಭಾಶ್ ಕಲ್ಲೂರ್ (ಹುಮ್ನಾಬಾದ್) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಮ್ನಾಬಾದ್ ತಾಲ್ಲೂಕಿನ ಯಾವ ಯಾವ ದರ್ಜೆಯ ಆಸ್ಪತ್ರೆಗಳಿಗೆ ದಾಖಲಾಗಿರುವ ಒಳರೋಗಿಗಳಿಗೆ ಹಾಲೂ-ಬ್ರೆಡ್ ಉಪಹಾರ ಊಟ ವಿತರಿಸುವ ಅವಕಾಶವಿದೆ; ವಿವರ ನೀಡುವುದು)

ಆ) ಹುಮ್ನಾಬಾದ್ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಉಪಹಾರ ಹಾಗೂ ಮಧ್ಯಾನ್ಹದ ಊಟವನ್ನು ಒದಗಿಸಲಾಗುತ್ತಿದೆಯೇ;

ಇ) ವಿತರಿಸುತ್ತಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ವಿತರಿಸಲಾಗುತ್ತಿದೆ; (ವಿವರ ನೀಡುವುದು)

ಈ) ವಿತರಿಸದೇ ಇದ್ದಲ್ಲಿ, ಕಾರಣಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) 30 ಹಾಸಿಗೆಗಳುಳ್ಳ ಆಸ್ಪತ್ರೆಗಳಲ್ಲಿ ಮಾತ್ರ ಹಾಲು, ಬ್ರೆಡ್ ವಿತರಿಸಬಹುದು.

ಆ) ವಿತರಿಸುತ್ತಿಲ್ಲಾ.

ಇ) ಅನ್ವಯಿಸುವುದಿಲ್ಲ

ಈ) ವಿಷಯವನ್ನು ಜಿಲ್ಲಾ ಪಂಚಾಯತ್ ಪರಿಗಣಿಸಬೇಕಾಗುತ್ತದೆ.

೫ನೇ ತರಗತಿಯನ್ನು ಪ್ರಾಥಮಿಕ ಶಾಲೆಗೂ ೮ನೇ ತರಗತಿಯನ್ನು ಮಾಧ್ಯಮಿಕ ಶಾಲೆಗೂ ಸೇರಿಸುವುದು

2621(3013) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ೫ನೇ ತರಗತಿಯನ್ನು ಪ್ರಾಥಮಿಕ ಶಾಲೆಗೂ ೮ನೇ ತರಗತಿಯನ್ನು ಮಾಧ್ಯಮಿಕ ಶಾಲೆಗೂ ಸೇರಿಸಲು ಯೋಚಿಸಿದೆಯೇ?

ಆ) ಇದರಿಂದ ಉಂಟಾಗುವ ಪ್ರಯೋಜನಗಳೇನು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ೨೦೦೧-೨೦೦೨ನೇ ಶೈಕ್ಷಣಿಕ ವರ್ಷದಲ್ಲಿ ೫ನೇ ತರಗತಿಯನ್ನು ಕಿರಿಯ ಪ್ರಾಥಮಿಕ ಶಾಲೆಗೆ ಸೇರಿಸಲಾಗಿದೆ. ೧ ರಿಂದ ೭ನೇ ತರಗತಿ ಹಾಗೆಯೇ ಮುಂದುವರಿದಿದೆ. ೮ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲೆಯೊಂದಿಗೆ ಸೇರಿಸುವ ವಿಷಯವು ಪರಿಶೀಲನೆಯಲ್ಲಿದೆ.

ಆ) ಪ್ರತ್ಯೇಕವಾಗಿ ನಡೆಯುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೪ನೇ ತರಗತಿಯವರಿಗೆ ಮಾತ್ರ ವ್ಯಾಸಂಗಕ್ಕೆ ಅವಕಾಶವಿದ್ದು, ೫ನೇ ತರಗತಿ ಶಿಕ್ಷಣವನ್ನು ಮುಂದುವರಿಸಲು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾರ್ಥಿಗಳು ದೂರದ ಪ್ರದೇಶಗಳಿಗೆ ನಡೆದು ಹೋಗಬೇಕಾಗಿದೆ. ಈ ಕಾರಣದಿಂದಾಗಿ ಬಹುತೇಕ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ಪ್ರಾಕೃತಿಕ ಅಡೆತಡೆಗಳಿಂದಾಗಿ ವ್ಯಾಸಂಗವನ್ನು ನಿಲ್ಲಿಸುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಈ ಬದಲಾವಣೆಯನ್ನು ಮಾಡಲಾಗಿದೆ. ಈ ಬದಲಾವಣೆಯು ಕೇಂದ್ರ ಮಾದರಿ ಪಠ್ಯ ಕ್ರಮದ ಮಾದರಿಯ ಅನುಸಾರ ಇದೆ.

ಸರ್ಕಾರಿ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕೆಲಸ ಮಾಡುತ್ತಿರುವುದು

2622(3014) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.